ವಿತ್ತೀಯ ಕಾರ್ಯಕಲಾಪಗಳು

ಅಧಿಕ ಅನುದಾನಗಳ ಬೇಡಿಕೆಗಳನ್ನು ಮಂಡಿಸುವುದು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

"ಭಾರತ ಸಂವಿಧಾನ ೨೦೫ (೧) ಬಿ) ಅನುಚ್ಛೇದದ ಮೇರೆಗೆ ೧೯೮೩-೮೪ ನೇ ಸಾಲಿನಲ್ಲಿ ಪುರಸ್ಕೃತವಾದ ಧನವಿನಿಯೋಗದಲ್ಲಿ ಸೂಚಿಸಲಾದ ಮೊತ್ತಕ್ಕಿಂತ ಮೊಬಲಗನ್ನು ಮೀರಿ ಮಾಡಿದ ಹೆಚ್ಚು ವೆಚ್ಚಗಳನ್ನು ಭರಿಸುವ ಬಗ್ಗೆ ಅನುದಾನಗಳಿಗಾಗಿ ಬೇಡಿಕೆಯನ್ನು ತೋರಿಸುವ ವಿವರಣಾ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ದಯಮಾಡಿ ತಾವು ಅಲೋ ಮಾಡಬೇಕು.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಅನುದಾನಗಳ ಬೇಡಿಕೆಗಳನ್ನು ಸಭೆಯು ಮುಂದೆ ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

(೧) ಫೆಡರೇಷನ್ನಿನವರು ವಿತರಣೆ ಮಾಡುತ್ತಿರುವ ಬಿ. ಕಾಂಪೋನೆಂಟ್ ಗೊಬ್ಬರದ ಬೆಲೆ ಬಹಿರಂಗ ಮಾರುಕಟ್ಟೆಗಿಂತ ಹೆಚ್ಚಾಗಿರುವುದು.

ಅಧ್ಯಕ್ಷರು.—ಈಗ ತಮಗೆ ಚಾನ್ಸ್ ತಾವು ಸಹಕಾರ ಮಂತ್ರಿಗಳ ಗಮನ ಸೆಳೆಯಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಜ್ಯದ ರೈತರ ಅನುಕೂಲಕ್ಕಾಗಿ ಫೆಡರೇಷನ್ ಮೂಲಕ ವಿತರಣೆ ಮಾಡುತ್ತಿರುವ 'ಬಿ' ಕಾಂಪೋನೆಂಟ್ ಗೊಬ್ಬರದ ಬೆಲೆಯು ಬಹಿರಂಗ ಮಾರುಕಟ್ಟೆಯ ಬೆಲೆಗಿಂತ ಹೆಚ್ಚಾಗಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿರುವ ವಿಷಯದ ಬಗ್ಗೆ ಮಾನ್ಯ ಸಹಕಾರ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್ ಜಾಲಪ್ಪ(ಸಹಕಾರ ಸಚಿವರು).—ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲವು ರಾಜ್ಯದಲ್ಲಿ ಸಹಕಾರ ಸಂಘಗಳ ಮೂಲಕ, ರಾಜ್ಯದ ಬಳಕೆಯ ಶೇಕಡ ೩೦ ರಷ್ಟು ರಸಗೊಬ್ಬರಗಳನ್ನು ಅಂದರೆ ಸುಮಾರು ೩ ಲಕ್ಷ ಟನ್ನುಗಳಷ್ಟು ರಸಗೊಬ್ಬರವನ್ನು ಮಾರಾಟ ಮಾಡುತ್ತಿದೆ. ಮಹಾಮಂಡಲವು ಸಹಕಾರಿ ಸಂಘಗಳಿಗೆ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು (೧) ನಗದು ರೂಪ (೨) ತೆರೆದ ಸಾಲ, ಹಾಗೂ (೩) ಅಲ್ಪಾವಧಿ ಇಲ್ಲವೇ 'ಬಿ' ಕಾಂಪೊನೆಂಟ್ ಸಾಲದ ಮೂಲಕ ಸಂಬರಾಜು ಮಾಡುತ್ತದೆ.

ಈ ರೀತಿಯಾಗಿ ಸರಬರಾಜು ಮಾಡುವಾಗ ಮಹಾಮಂಡಲವು ಸಮಯಕ್ಕೆ ಸರಿಯಾಗಿ ರೈತರಿಗೆ ಬೇಕಾದ ಗೊಬ್ಬರವನ್ನು ಒದಗಿಸಲು, ವಿವಿಧ ರೀತಿಯ ರಸಗೊಬ್ಬರಗಳನ್ನು ೩-೪ ತಿಂಗಳು ಮೊದಲೇ ಖರೀದಿಸಿ ಶೇಖರಿಸಬೇಕಾಗುತ್ತದೆ. ಈ ರೀತಿ ಶೇಖರಿಸಿದ ಗೊಬ್ಬರಕ್ಕೆ ಗೋರಾಮಂ ಬಾಡಿಗೆ, ಹಣಕ್ಕೆ ಬಡ್ಡಿಯನ್ನು ಸಹ ತೆರಬೇಕಾಗುತ್ತದೆ. ಹಾಗೂ ಮಹಾಮಂಡಲದಲ್ಲಿ ಈ ರೀತಿಯಲ್ಲಿ ಸಂಗ್ರಹಿಸಿದ ಗೊಬ್ಬರವನ್ನು ಬಿ' ಕಾಂಪೊನೆಂಟ್ ಅಥವಾ ಅಲ್ಪಾವಧಿ ಸಾಲದ ಮೇಲೆ ಸಹಕಾರಿ ಸಂಘಗಳಿಗೆ ನೀಡಿದರೆ, ಅನೇಕ ವೇಳೆ ನಿಗದಿ ಪಡಿಸಿದ ೩೦ ದಿನದ ಸಾಲಕ್ಕಿಂತ ೬ ತಿಂಗಳಾದರೂ ಹಣ ವಾಪಸ್ಸು ಬರದ ಪ್ರಸಂಗಗಳಿವೆ. ಅಲ್ಲದೇ, ಮಾರಾಟಗಾರರು ಅಥವಾ ಉತ್ಪಾದಕರು ಆಯಾ ಕಂಪನಿಯ ಗೊಬ್ಬರಗಳನ್ನು ಖಾಸಗಿ ಮಾರಾಟಗಾರರಿಗೆ ಹಾಗೂ ಇತರರಿಗೆ ಬಿತ್ತನೆ ಸಮಯ ಹಾಗೂ ಮಾರಾಟ ವಾಗುವ ದಿನಗಳಲ್ಲಿ ಅನೇಕ ರಿಯಾಯಿತಿ ಹಾಗೂ ಕಡತಗಳೊಂದಿಗೆ ಮಹಾಮಂಡಲವನ್ನು ಹೊರತು ಪಡಿಸಿ ಮಾರಾಟ ಮಾಡುತ್ತಾರೆ. ಒಂದು ವೇಳೆ ಮಹಾಮಂಡಳದಲ್ಲಿ ಯಾವುದಾದರೂ ಗೊಬ್ಬರ ದಾಸ್ತಾನು ಇಲ್ಲದೆ ಹೋದ ಸಂದರ್ಭದಲ್ಲಿ ಖಾಸಗಿಯವರು ತುಂಬಾ ದುಬಾರಿ ದರದಲ್ಲಿ ಗೊಬ್ಬರ ಮಾರಾಟ ಮಾಡುವ ಪ್ರಸಂಗಗಳು ಉಂಟು. ಈ ಬಗ್ಗೆ ಸರ್ಕಾರವು ಉತ್ಪಾದಕರನ್ನು ಈ ರೀತಿಯ ಮಾರಾಟ ವ್ಯವಸ್ಥೆಯನ್ನು ತಡೆಯಲು ಕೇಳಿಕೊಳ್ಳಲಾಗಿದೆ. ಮೇಲಿನ ಕಾರಣಗಳಿಂದ ಕೆಲವು ರಸಗೊಬ್ಬರಗಳ ಬೆಲೆಯಲ್ಲಿ ಕೆಲವೇ ಸಂದರ್ಭಗಳಲ್ಲಿ ಮಾರಾಟ ಬೆಲೆಯಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ,

ಇಡೀ ದೇಶದ ಯೂರಿಯಾ ಉತ್ಪಾದನೆ-ದಾಸ್ತಾನು ನಿರೀಕ್ಷೆಗಿಂತ ಹೆಚ್ಚಾಗಿದ್ದು ಕಂಪನಿಯವರು ಹೊಂದಿರುವ ದಾಸ್ತಾನನ್ನು ಮಾರಾಟ ಮಾಡಲು ಮಹಾಮಂಡಳವನ್ನು ಹೊರತುಪಡಿಸಿ ಖಾಸಗಿಯವರಿಗೆ ಅನೇಕ ರಿಯಾಯಿತಿಗಳನ್ನು ಕೊಟ್ಟು ವಿಪರೀತವಾಗಿ ಮಾರುಕಟ್ಟೆಗೆ ಬಿಟ್ಟಿರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಇಂತಹ ಪರಿಸ್ಥಿತಿ ತಾತ್ಕಾಲಿಕವಾಗಿರುತ್ತೆ. ಆದಾಗ್ಯೂ ಈಗ ಎಲ್ಲಾ ಗೊಬ್ಬರಗಳ ಬೆಲೆಯನ್ನು ಪರಿಷ್ಕರಿಸಿ, ಖಾಸಗಿಯವರ ಬೆಲೆಗೆ ಸಮಾನಾಗಿರಿಸಲಾಗಿದೆ.

ಆಗಸ್ಟ್ ತಿಂಗಳ ಮೂರನೇ-ಎರಡನೇ ವಾರ ಮಾರುಕಟ್ಟೆಯಲ್ಲಿ ದರಗಳು.	ಖಾಸಗಿಯವರ ಮಾರಾಟ ಬೆಲೆ ಟನ್ನಿಗೆ	ಮಹಾಮಂಡಲದ ಮಾರಾಟ ಬೆಲೆ ಟನ್ನಿಗೆ
೧	೨	೩
ಯೂರಿಯಾ	ರೂ. ೨೧೯೦ ರಿಂದ ರೂ. ೨೨೨೫	ರೂ. ೨೨೪೦
ಡಿ.ಎ.ಪಿ.	ರೂ. ೩೩೮೦ ರಿಂದ ರೂ. ೩೪೦೦	ರೂ. ೩೪೦೦
ಪರಿಷ್ಕೃತ ಮಾರುಕಟ್ಟೆ ದರಗಳು :		
ಯೂರಿಯಾ	—	ರೂ. ೨೧೭೫
ಡಿ.ಎ.ಪಿ.	—	ರೂ. ೩೩೮೦

ಈ ರೀತಿಯ ವ್ಯತ್ಯಾಸವನ್ನು ನಿಯಂತ್ರಿಸಲು ಡಿ.ಸಿ.ಸಿ. ಬ್ಯಾಂಕ್‌ನವರು ಧಾರವಾಡ ಜಿಲ್ಲೆಯಲ್ಲಿರುವಂತೆ ನೇರವಾಗಿ ಮಹಾಮಂಡಳಕ್ಕೆ ನೇರ ಡಿ.ಡಿ. ಯನ್ನು ಕೊಡುವುದರ ಮೂಲಕ ಮಾರಾಟ ಬೆಲೆಯಲ್ಲಿನ ವ್ಯತ್ಯಾಸವನ್ನು ಹೋಗಲಾಡಿಸಲು ಅವರನ್ನು ಮನವೊಲಿಸಲಾಗುತ್ತಿದೆ. ಆದ್ದರಿಂದ ಮಹಾಮಂಡಳಕ್ಕೆ ಸಕಾಲಕ್ಕೆ ಹಣ ಸಂದಾಯವಾಗಿ, ಅನಗತ್ಯ ಬಡ್ಡಿಯನ್ನು ನೀಡುವುದು ತಪ್ಪುತ್ತದೆ. ಹಾಗೂ ಗೊಬ್ಬರದ ಬೆಲೆಯನ್ನು ನಿಯಂತ್ರಿಸಬಹುದು.

ಬಹಿರಂಗ ಮಾರುಕಟ್ಟೆಯಲ್ಲಿ ಗೊಬ್ಬರ ಕೊಳ್ಳಲು ಪೂರ್ಣ ಸಾಲದ ಹಣ ಕೊಡುವ ವಿಚಾರವನ್ನು ಪರಿಶೀಲಿಸಿದಾಗ ಆರ್. ಬಿ. ಐ ಹಾಗೂ ನಬಾರ್ಡ್‌ನ ಕಾನೂನು-ಕಾಯಿದೆಯ ಪ್ರಕಾರ ಇದಕ್ಕೆ ಅವಕಾಶವಿರುವುದಿಲ್ಲ, ಈ ವ್ಯತ್ಯಾಸವು ಯೂರಿಯಾ ಮತ್ತು ಡಿ.ಎ.ಪಿ. ದರಗಳಲ್ಲಿ ಕಂಡುಬಂದಿದೆ. ಇನ್ನು ಮುಂದೆ ಮಹಾಮಂಡಳವು ಬೆಲೆಗಳನ್ನು ಬಹಿರಂಗ ಮಾರುಕಟ್ಟೆ ಬೆಲೆಗಳಿಗೆ ಸಮಾನೀಕರಿಸಬೇಕೆಂದು ಮತ್ತು ಮಾರುಕಟ್ಟೆಯ ಒಲವುಗಳಿಗೆ ತಕ್ಕಂತೆ ಸಕಾಲದಲ್ಲಿ ವ್ಯವಹರಿಸಬೇಕೆಂದು ಸಲಹೆ ಮಾಡಲಾಗಿದೆ.

ರೈತರು ಬಹಿರಂಗ ಮಾರುಕಟ್ಟೆಯಲ್ಲಿ ರಾಸಾಯನಿಕ ಗೊಬ್ಬರಗಳನ್ನು (ಯೂರಿಯಾ ಮತ್ತು ಡಿ.ಎ.ಪಿ.) ಖರೀದಿಸುವುದಾದರೆ ಪೂರೈಕೆಯಲ್ಲಿ ಕೊರತೆ ಇರುವ ಸಮಯಗಳಲ್ಲಿ ಖಾಸಗೀ ವರ್ತಕರು ಸ್ವಾರ್ಥಕ್ಕಾಗಿ ರೈತಾಪಿ ಜನರನ್ನು ಶೋಷಿಸುವ ಸಂಭವವಿದೆ. ಆದರೆ ಮಾರಾಟ ಮಹಾಮಂಡಳದಿಂದ ರಾಸಾಯನಿಕ ಗೊಬ್ಬರಗಳನ್ನು ಎಲ್ಲಾ ಸಮಯಗಳಲ್ಲಿ ಸರಿಯಾದ ಬೆಲೆಗಳಲ್ಲಿ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು.

ಈ ಮೇಲಿನ ಕಾರಣಗಳಿಗಾಗಿ ಮತ್ತು ಗೊಬ್ಬರ ಬೆಲೆಗಳಲ್ಲಿಯ ಅಂತರವನ್ನು ನಿವಾರಿಸಲು ಈಗಾಗಲೇ ಕ್ರಮ ಕೈಗೊಂಡಿರುವುದರಿಂದ 'ಬಿ' ಘಟಕದ ಸಾಲವನ್ನು ರೈತರಿಗೆ ತಮಗೆ ಸರಿಕಂಡ ಕಡೆ ಕೊಳ್ಳಲು ಅವಕಾಶವಾಗುವಂತೆ ನಗದಾಗಿ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇದು ಡಿ.ಎ.ಪಿ. ಮತ್ತು ಯೂರಿಯಾದಲ್ಲಿ ಇಂತಹ ವ್ಯತ್ಯಾಸ ಇದೆ. ಎಂದು ಕಾಣುತ್ತೆ. ಈ ಬಗೆ ಈಗಾಗಲೇ ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಈಗ ಏನು ಧಾರಣೆ ಇದೆ, ಅದಕ್ಕಿಂತ ಕಡಿಮೆ ಅಂದರೆ ೨೦೯೦ ರಿಂದ ೨೧೨೫ ರೂಪಾಯಿಗಳವರೆಗೆ ಒಂದು ಕ್ವಿಂಟಾಲ್ ಯೂರಿಯಾವನ್ನು ಮಾರಾಟ ಮಾಡಬೇಕೆಂತಲೂ, ನಂತರ ಡಿ.ಎ.ಪಿ ಯನ್ನು ಒಂದು ಕ್ವಿಂಟಾಲ್‌ಗೆ ೩೩೯೦ ರೂಪಾಯಿಗಳಿಗೆ ಇಳಿಸಬೇಕೆಂತಲೂ ತೀರ್ಮಾನ ಮಾಡಿದ್ದೇವೆ. ಕಳೆದ ೪-೫ ತಿಂಗಳಿಂದ ಈ ತೊಂದರೆಯಾಗಿದೆ. ಎಕಾನಾಮಿಕ್ ಟೈಮ್ಸ್‌ನಲ್ಲಿ ಈ ವಿಷಯ ವರದಿಯಾಗಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ.

"The unprecedented glut has gripped the indigenous fertiliser industry. The producers resorting to distress sales, heavy discounts and rebates. The glut is evidenced from the stocks of the domestic fertilisers in sil houses and field warehouses of the manufacturers. While in January 83 these stocks were of the order of 6.26 lakhs tonnes, this declined to 3,19,000 tonnes in January 84 and remained around 3.93 lakh tonnes in January 85. This stock shot upto 8 51 lakh tonnes in January 86, 9 lakh tonnes in February, '86 and 10,80,000 tonnes in March, 15,07,000 tonnes in April 86 and to the staggering 16,06,000 tonnes in May,' 86."

ಇದು ಏನಾಗಿದೆ ಎಂದರೆ, ಪ್ರೊಡ್ಯೂಸರ್ಸ್ ಏನಿದ್ದಾರೆ, ಅವರು ನೇರವಾಗಿ ಖಾಸಗೀಯವರಿಗೆ ಮಾರಾಟ ಮಾಡಿ, ಜೊತೆಗೆ ರೀಬೇಟ್‌ನ್ನು ಕೊಡುತ್ತಾರೆ. ೩–೪ ತಿಂಗಳವರೆಗೆ ಬೇಕಾಗುವಂತಹ ಗೊಬ್ಬರವನ್ನು ಸ್ಟಾಕ್ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಮಾಡಲಾಗಿದ್ದು, ಅದಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳಾಗುತ್ತವೆ. ಆ ರೀತಿಯ ಸ್ಟಾಕ್‌ನ್ನು ನಾವು ಇಟ್ಟುಕೊಳ್ಳದಿದ್ದರೆ, ಬೇರೆ ಖಾಸಗಿಯವರು ಇದರ ಬೆಲೆಯನ್ನು ಜಾಸ್ತಿ ಮಾಡಿ ಮಾರಾಟ ಮಾಡುವ ಸಂದರ್ಭ ಬರುತ್ತದೆ. ಕಡೆಯ ಪಕ್ಷ ೨೫ ಸಾವಿರ ಟನ್ ಗೊಬ್ಬರದ ಸ್ಟಾಕ್‌ನ್ನು ನಮ್ಮಲ್ಲಿ ಯಾವಾಗಲೂ ಇಟ್ಟುಕೊಂಡಿರುತ್ತೇವೆ. ಇದಕ್ಕೆ ನವಂಗೆ ಬೀಳತಕ್ಕಂತಹ ಬಡ್ಡಿ, ಸಿಬ್ಬಂದಿ ವೆಚ್ಚ ಅದರ ಬಾಡಿಗೆ ಎಲ್ಲಾ ಸೇರಿ ೬೨ ರೂಪಾಯಿಗಳು ಒಂದು ಟನ್ನಿಗೆ ಜಾಸ್ತಿಯಾಗುತ್ತದೆ. ಆ ರೀತಿ ಜಾಸ್ತಿಯಾಗುವ ಹಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡುವ ಸಲುವಾಗಿ ಈಗಾಗಲೇ ಸಂಬಂಧಪಟ್ಟ ಕಾರ್ಖಾನೆಗಳ ವರನ್ನು ಕರೆಯಿಸಿ ಮಾತನಾಡಿದ್ದೇನೆ. ನಮ್ಮಲ್ಲಿ ಏನು ಸ್ಟಾಕು ಇದೆ, ನೀವು ಈಗ ಏನು ಖಾಸಗಿಯವರಿಗೆ ಯಾವ ಬೆಲೆಗೆ ಮಾರಾಟ ಮಾಡುತ್ತೀರಿ, ಅದೇ ದರದಲ್ಲಿ ಮಾರಾಟ ಮಾಡುವುದಕ್ಕೆ ನಮ್ಮ ಹತ್ತಿರ ಇರುವಂತಹ ಸ್ಟಾಕಿಗೆ ಬೆಲೆಯನ್ನು ಕಡಿಮೆ ಮಾಡಬೇಕು ಎಂಬುದಾಗಿ ಅವರನ್ನು ಕೇಳಿದ್ದೇವೆ. ಅದಕ್ಕೆ ಕೆಲವರು ಒಪ್ಪಿಕೊಂಡಿದ್ದಾರೆ. ಇನ್ನೊಂದು ಸಭೆಯನ್ನೂ ಕೂಡ ನಾನು ಕರೆದಿದ್ದೇನೆ. ಇದನ್ನು ಇನ್ನೂ ಕಡಿಮೆ ಮಾಡುವ ಬಗ್ಗೆ ಮುಂದಿನ ತಿಂಗಳ ಮೊದಲ ವಾರದಲ್ಲಿ ಸಭೆಯನ್ನು ಕರೆದು ತೀರ್ಮಾನ ಮಾಡುತ್ತೇನೆ. ಸಧ್ಯಕ್ಕೆ ಒಂದು ಟನ್ ಯೂರಿಯಾಕ್ಕೆ ೨೦೮೦ ರೂಪಾಯಿಗಳಿಗೆ ಮಾರಾಟ ಮಾಡ ಬೇಕೆಂತಲೂ, ಅದೇ ರೀತಿ ಡಿ.ಎ.ಪಿ.ಗೆ ಒಂದು ಕ್ವಿಂಟಾಲ್‌ಗೆ ೩೫೪೦ ರೂಪಾಯಿಗಳಿಗೆ ಮಾರಾಟ ಮಾಡಬೇಕೆಂತಲೂ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ಫೆಡರೇಷನ್ ಪ್ರಾರಂಭವಾದುದು, ರೈತರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಮಾರುಕಟ್ಟೆಯಲ್ಲಿ ಸಿಕ್ಕತಕ್ಕಂತಹ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಸಿಕ್ಕಬೇಕೆಂಬ ಮೂಲ ಉದ್ದೇಶವನ್ನು ಇಟ್ಟುಕೊಂಡು, ಸನ್ಮಾನ್ಯ ಸಚಿವರಾದ ಜಾಲಪ್ಪನವರ ಉತ್ತರವನ್ನು ನೋಡಿದ ಮೇಲೆ ಸೌಲಭ್ಯವನ್ನು ಕಲ್ಪಿಸಿಕೊಡುವ ಹೆಸರಿನಲ್ಲಿ ರೈತರ ಶೋಷಣೆಯನ್ನು ಮಾಡುವುದಕ್ಕಾಗಿಯೇ ಇದು ಪ್ರಾರಂಭವಾಗಿದೆ ಎಂಬುದಾಗಿ ಅನಿವಾರ್ಯವಾಗಿ ನಾನು ಹೇಳಬೇಕಾಗಿದೆ. ಸಹಕಾರಿ ಆಂಧೋಳನ ಬಂದದ್ದೇ ಭೆಲೆಯನ್ನು ಹತೋಟಿಯಲ್ಲಿ ಇಟ್ಟು, ಕೊಂಡು, ರೈತನಿಗೆ ಸಮಯಕ್ಕೆ ಸರಿಯಾಗಿ, ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಗೊಬ್ಬರ ಸಿಕ್ಕಬೇಕು ಎಂದು. ಈಗ ಫೆಡರೇಷನ್ ಮೂಲಕ ಮಾರಾಟ ಮಾಡುವಂತಹ ಗೊಬ್ಬರ ಬಹಿರಂಗ ಮಾರುಕಟ್ಟೆ ಬೆಲೆಗಿಂತ ಜಾಸ್ತಿಯಾಗಿದೆ. ಈ ಒಂದು ಸೂಚನೆಗೆ ನಾನು ಕೆಲವೊಂದು ಬಿಲ್ಲುಗಳನ್ನು ಕೂಡ ಲಗತ್ತಿಸಿದ್ದೇನೆ. ಶಿಕಾರಿಪುರ ವ್ಯವಸಾಯೋತ್ಪನ್ನ ಸಹಕಾರ ಸಂಘದಲ್ಲಿ ನಾನು ೧೦,೦೦೦ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದೇನೆ. ಆದರಲ್ಲಿ ೪,೭೫೦ ರೂಪಾಯಿಗಳ ಗೊಬ್ಬರವನ್ನು ಅಲ್ಲೇ ತೆಗೆದು ಕೊಂಡಿದ್ದೇನೆ. ನಾನೂ ಕೂಡ ಒಬ್ಬ ರೈತ. ನಾನು ಕೊಂಡುಕೊಂಡಂತಹ ಯೂರಿಯಾದ ಬೆಲೆ ೫೦ ಕೆ. ಜಿ. ಇರತಕ್ಕಂತಹದ್ದಕ್ಕೆ ೧೧೭ ರೂಪಾಯಿಗಳಂತೆ ನನಗೆ ಕೊಟ್ಟಿದ್ದಾರೆ. ಇದು ಫೆಡರೇಷನ್‌ನಿಂದ ಸೊಸೈಟಿಗೆ ಬಂದಿರುವಂತಹ ಗೊಬ್ಬರ. ಸೊಸೈಟಿಯವರು ನನಗೆ ಕೊಟ್ಟಿದ್ದಾರೆ. ಇದೇ ಗೊಬ್ಬರವನ್ನು

ನಾನು ಬಹಿರಂಗ ಮಾರುಕಟ್ಟೆಯಲ್ಲೂ ಕೊಂಡು ಕೊಂಡಿದ್ದೇನೆ. ಅಲ್ಲಿ ೫೦ ಕೆ.ಜಿ.ಗೆ ೧೧೦ ರೂಪಾಯಿ ಗಳಿಗೆ ತೆಗೆದುಕೊಂಡಿದ್ದೇನೆ. ಆದರ ಬಿಲ್ಲು ನಂ. ೫೫೭೧, ದಿನಾಂಕ ೧೭-೮-೮೫ರಲ್ಲಿ. ನಂತರ ಆಗ್ರೋ ಇಂಡಸ್ಟ್ರೀಸ್‌ನಿಂದ ಕೊಡಲಾಗುವ ಗೊಬ್ಬರನ್ನೂ ಕೂಡ ನಾನು ಕೊಂಡಿದ್ದೇನೆ. ಆಗ್ರೋ ಇಂಡಸ್ಟ್ರೀಸ್ ನಿಂದ ಕೊಂಡು ಕೊಂಡಂತಹ ಇದೇ ಯೂರಿಯಾಗೆ ೫೦ ಕೆ. ಜಿ. ಗೆ ೧೧೦-೫೦ ರೂಪಾಯಿಗಳಂತೆ ನನಗೆ ಮಾರಾಟ ಮಾಡಿದ್ದಾರೆ. ಆದರೆ ಒಂದು ಕೆ.ಜಿ ಯೂರಿಯಾದ ಬೆಲೆ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಮಾರಾಟ ಮಾಡುವಂತಹದ್ದೂ ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತಹ ಗೊಬ್ಬರಕ್ಕಿಂತ ೬ ರೂಪಾಯಿ ಜಾಸ್ತಿ. ಅದೇ ರೀತಿ ೧೭:೧೭ ಹಾಗೂ ೧೪:೧೪ ಗೊಬ್ಬರಕ್ಕೂ ಕೂಡ ಒಂದು ಕ್ವಿಂಟಾಲ್‌ಗೆ ೪ ರೂಪಾಯಿ ಜಾಸ್ತಿಯಾಗಿದೆ. ನಾನು ಒಬ್ಬ ಶಾಸಕನಾಗಿ ಕೊಂಡಿರುವ ಗೊಬ್ಬರದ ವ್ಯತ್ಯಾಸ ಇದು. ಉತ್ತರ ಕೊಡಬೇಕಾದರೆ, ಮಾನ್ಯ ಮಂತ್ರಿಗಳು, ಬಡ್ಡಿ, ಗೋಡೌನ್ ಬಾಡಿಗೆ, ಸಿಬ್ಬಂದಿ ವೆಚ್ಚ ಎಲ್ಲಾ ಸೇರಿ ಅಷ್ಟಾಗುತ್ತದೆ ಎಂಬುದಾಗಿ ಹೇಳಿದರು. ಹಾಗಾದರೆ ಈ ಒಂದು ಮಹಾ ಮಂಡಲವನ್ನು ಪ್ರಾರಂಭ ಮಾಡಿದಂತಹ ಉದ್ದೇಶ ಏನು ? ಫೆಡರೇಷನ್ ಪ್ರಾರಂಭವಾದುದು ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಮೂಲ ಉದ್ದೇಶದಿಂದ. ಬಹಿರಂಗ ಮಾರುಕಟ್ಟೆಗೆ ಕಾರ್ಖಾನೆಯವರು ೪೫ ದಿವಸಗಳ ಕ್ರೆಡಿಟ್ ಆಧಾರದ ಮೇಲೆ ಯಾವ ರೀತಿ ಕೊಡುತ್ತಾರೋ, ನಿಮಗೂ ಅದೇ ಆಧಾರದ ಮೇಲೆ ಗೊಬ್ಬರವನ್ನು ಕಾರ್ಖಾನೆಯವರು ಕೊಡುತ್ತಾರೆ.

ಇವತ್ತು ಫೆಡರೇಷನ್‌ನಲ್ಲಿ ಕಡಿಮೆ ಬೆಲೆಗೆ ಗೊಬ್ಬರ ಸಿಗುವ ವ್ಯವಸ್ಥೆ ಮಾಡ ಬೇಕು. ಹೆಚ್ಚಿನ ಬೆಲೆಗೆ ಕೊಂಡುಕೊಳ್ಳುವ ಸಂದರ್ಭದಲ್ಲಿ ನೀವು ಏನು ಪರಿಹಾರವನ್ನು ಒದಗಿಸಿಕೊಡುತ್ತೀರಿ? ಸಾಲ ತೆಗೆದುಕೊಂಡ ಮೇಲೆ ಅದನ್ನು ತೀರಿಸುವ ಜವಾಬ್ದಾರಿ ರೈತನಿಗೆ ಇರುತ್ತದೆ. ಸಾಲ ತೆಗೆದುಕೊಂಡು ಎಲ್ಲಿ ಬೇಕೋ ಅಲ್ಲಿ ಕೊಂಡುಕೊಳ್ಳುತ್ತಾನೆ. ಈ ರೀತಿ ಉತ್ತರ ಕೊಟ್ಟರೆ ಬಹಿರಂಗ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಬಹುದೆಂದು ಹೇಳಿದಂತಾಗುತ್ತದೆ. ಈ ಫೆಡರೇಷನ್‌ನಲ್ಲಿ ಮಾರ್ಕೆಟ್ಟಿನಲ್ಲಿ ಸಿಗುವ ಬೆಲೆಗಿಂತ ಕಡಿಮೆ ಬೆಲೆಗೆ ಸಿಗುವ ವ್ಯವಸ್ಥೆ ಮಾಡುತೀರಾ? ನಾನು ಕೊಂಡುಕೊಂಡು ತೊಂದರೆ ಅನುಭವಿಸುತ್ತಿದ್ದೇನೆ, ಯೂರಿಯ ಬೆಲೆ ಒಂದು ಕ್ವಿಂಟಾಲಿಗೆ ೧೪ ರೂಪಾಯಿಗಳಂ ಜಾಸ್ತಿಯಾದರೆ ರೈತನನ್ನು ಶೋಷಣೆ ಮಾಡಿದಂತಾಗುವುದಿಲ್ಲವೆ ? ಇದನ್ನು ಕಡಿಮೆ ಮಾಡುವುದಕ್ಕೆ ವ್ಯವಸ್ಥೆ ಮಾಡುತೀರಾ ? ಬಿ. ಕಾಂಪೋನೆಂಟನ್ನು ಕಂಪಲ್ಸರಿ ಮಾಡದೆ ಬೇಕಾದಷ್ಟನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ. ಈ ರೀತಿ ಬೆಲೆ ಹೆಚ್ಚು ಮಾಡಿ ರೈತರ ಶೋಷಣೆ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ತಾವು ಏನು ಭಾಷಣ ಮಾಡುತ್ತಿದ್ದಿರೋ ಹೇಗೆ ? ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಹೇಗೆ ಹೇಳಬೇಕು ? ಭಾಷಣ ಮಾಡುತ್ತಿಲ್ಲ. ನಾನೂ ಒಬ್ಬ ರೈತ. ಫೆಡರೇಷನ್‌ನವರು ಇಡೀ ರಾಜ್ಯದಲ್ಲಿ ಈ ಬೆಲೆಗೆ ಯೂರಿಯವನ್ನು ಮಾರುತ್ತಿದ್ದಾರೆ. ಒಂದು ಕ್ವಿಂಟಾಲಿಗೆ ೧೪ ರೂಪಾಯಿಗಳು ಬೆಲೆಯಲ್ಲಿ ವ್ಯತ್ಯಾಸ ಇದೆ. ಬಹಿರಂಗ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಗುವ ಸಂದರ್ಭದಲ್ಲಿ ಈ ರೀತಿ ರೈತರನ್ನು ಶೋಷಣೆ ಮಾಡುವುದು ಸರಿಯೆ? ನಮಗೆ ಹಣ ಕೊಡಿ, ನಾವು ಬಹಿರಂಗ ಮಾರುಕಟ್ಟೆಯಲ್ಲಿಯೇ ತೆಗೆದುಕೊಳ್ಳುತ್ತೇವೆಂದು ರೈತರು ಹೇಳುತ್ತಾರೆ. ಇದಕ್ಕೆ ನೇರವಾಗಿ ಉತ್ತರವನ್ನು ನಾನು ಸರ್ಕಾರದಿಂದ ಕೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ತಮಗೂ ಗೊತ್ತಿರುವ ಹಾಗೆ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ತಾವೂ ಡೈರೆಕ್ಟರ್‌ರಾಗಿದ್ದಿರಿ. ಈ ಮಾರ್ಕೆಟಿಂಗ್ ಫೆಡರೇಷನ್ ಇಲ್ಲದಿದ್ದರೆ ಹಿಂದೆ ಸ್ಕೇರ್ಸಿಟಿ ಇದ್ದಾಗ ಯದ್ವಾತದ್ವ ಆಗುತ್ತಿತ್ತು. ರೈತರಿಗೆ ಗೊಬ್ಬರ ಸಿಗುತ್ತಿರಲಿಲ್ಲ. ಮಾರ್ಕೆಟಿಂಗ್ ಫೆಡರೇಷನ್ ಅನ್ನು ನಿಲ್ಲಿಸಿದರೆ ಮಾರ್ಕೆಟ್ಟಿನಲ್ಲಿ ಏನಾಗುತ್ತದೆಂದು ಅರ್ಥವಾಗುತ್ತದೆ. ಒಬ್ಬ ರೈತ ಸಹಕಾರ ಸಂಘದ ಸದಸ್ಯ ನಾದಾಗ ಮಾರ್ಕೆಟ್ ರೇಟಿಗಿಂತ ೮ ಆಣೆ ಕಡಿಮೆ ಸಿಗುವುದು ರೀಸನಬಲ್ ಮಾರ್ಕೆಟ್ ರೇಟಿಗಾದರೂ ಒದಗಿಸುವುದು ಸಹಕಾರಿಗಳ ಕರ್ತವ್ಯ. ನಾನೂ ಈಗಾಗಲೇ ಅವರಿಗೆ ಅಡ್ವೈಸ್ ಮಾಡಿದ್ದೇನೆ. ಇದರ ಬಗ್ಗೆ ಜಾಸ್ತಿ ಭಾಷಣ ಬೇಕಾಗಿಲ್ಲ, ನನಗೆ ಅರ್ಥವಾಗಿದೆ. ನನ್ನ ಕಷ್ಟವನ್ನು ಹೇಳಿದ್ದೇನೆ. ಮಾರ್ಕೆಟ್ ನಲ್ಲಿ ೧೬ಲಕ್ಷಟನ್ ಗೊಬ್ಬರ ಸ್ಟಾಕ್ ಇರುವುದರಿಂದ ಅವರುಆದನ್ನು ಮಾರುವುದಕ್ಕೆ ಆಗದೆ ಸೋಡಿ ಬಿಟ್ಟು

ಮಾರುತ್ತಿದ್ದಾರೆ. ನಾವು ಆಗಲೇ ಸ್ಟಾಕ್ ಇಟ್ಟುಕೊಂಡಿದ್ದೇವೆ. ಟನ್ನಿಗೆ ೨೦೮೦ ರೂಪಾಯಿನಂತೆ ಟಿಎಪಿಸಿಎಂಎಸ್. ಗೆ ಕೊಡಿ ಎಂದು ಹೇಳಿದ್ದೇವೆ. ಬಹುಶ: ೫೧ ರೂಪಾಯಿಗೆ ಯೂರಿಯವನ್ನು ಒದಗಿಸಬಹುದೆಂದು ಕಾಣುತ್ತದೆ. ಮಾನ್ಯ ಸದಸ್ಯರ ಪ್ರಾರ್ಥನೆ ಅರ್ಥವಾಗಿದೆ. ನಾವು ಅಧಿಕಾರಿಗಳನ್ನು ಕರೆದು ಮಾತನಾಡಿ ತೀರ್ಮಾನ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ನನ್ನ ಪ್ರಾರ್ಥನೆ ಏನೆಂದರೆ ನಾನು ಒಬ್ಬ ಶಾಸಕನಾಗಿ ಒಂದೊ ಕ್ವಿಂಟಾಲಿಗೆ ೧೪ ರೂಪಾಯಿಗಳನ್ನು ಜಾಸ್ತಿ ಕೊಟ್ಟು ಗೊಬ್ಬರವನ್ನು ಕೊಂಡಿದ್ದೇನೆ. ಹೀಗೆ ಜಾಸ್ತಿ ತೆಗೆದುಕೊಂಡಿರುವ ಸಂದರ್ಭದಲ್ಲಿ ಫೆಡರೇಷನ್ ಇರಬಾರದೆಂದು ಅಲ್ಲ. ಇದನ್ನು ನೋಡಿ ವ್ಯಾಪಾರ ಸ್ಥರು ಸುಲಿಗೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ನಾನು ಕಬ್ಬು ಭತ್ತ ಬಿತ್ತಬೇಕೆಂದರೆ ನನಗೆ ಆ ಟೈಮಿನಲ್ಲಿ ಯಾವ ಗೊಬ್ಬರ ತೆಗೆದುಕೊಳ್ಳುವುದಕ್ಕೂ ಪ್ರಾವಿಷನ್ ಇಲ್ಲ. ೧೦ಸಾವಿರ ರೂಪಾಯಿಯನ್ನು ಸಾಲ ತೆಗೆದುಕೊಂಡು ಬಿ. ಕಾಂಪೊನೆಂಟ್ ಗೊಬ್ಬರವನ್ನು ಕೊಂಡು ಸ್ಟಾಕ್ ಇಟ್ಟು ಕೊಳ್ಳಬೇಕು. ಸ್ಟಾಕ್ ಇಡುವುದಕ್ಕೆ ಜಾಗ ಇರುವುದಿಲ್ಲ. ಯೂರಿಯವನ್ನು ಇಟ್ಟುಕೊಂಡರೆ ಆದು ಕರಗಿ ಹೋಗುತ್ತದೆ. ಮೂರು ತಿಂಗಳು ಮುಂಚೆಯೇ ಗೊಬ್ಬರವನ್ನು ತೆಗೆದುಕೊಳ್ಳಬೇಕು. ಗೊಬ್ಬರದ ಬೆಲೆ ಕೂಡ ೮-೧೦ ರೂಪಾಯಿಗಳು ಜಾಸ್ತಿ. ನಾಳೆ ಬಿತ್ತನೆ ಕಾಲದಲ್ಲಿ ಪೊಟ್ಯಾಷ್ ಕೊಡಿ, ಯೂರಿಯ ಕೊಡಿ ಎಂದರೆ ನಿಮ್ಮಲ್ಲಿ ಇರುವುದಿಲ್ಲ. ಇದನ್ನು ಬೇಕಾದ ಕಾಲದಲ್ಲಿ ಮಾರುವುದಕ್ಕೆ ಅಲ್ಲವೆ ಫೆಡರೇಷನ್ ಅನ್ನು ಮಾಡಿದ್ದುದು. ಅದಿಲ್ಲದೆ ರೈತರನ್ನು ಶೋಷಣೆ ಮಾಡುವ ಕೆಲಸ ಫೆಡರೇಷನ್‌ನಲ್ಲಿ ಆಗುತ್ತಿದ್ದರೆ ಏನು ಪ್ರಯೋಜನ ? ರೈತರ ಸಮಸ್ಯೆಯನ್ನು ನಿವಾರಿಸುವುದಕ್ಕಲ್ಲವೆ ಆದನ್ನು ಮಾಡಿದ್ದುದು. ಈ ಬಗ್ಗೆ ನೀವು ತಿಂಕ್ ಟ್ಯಾಂಕ್‌ನಲ್ಲಿ ಚರ್ಚೆ ಮಾಡಿದ್ದೀರಾ? ಲಕ್ಷಾಂತರ ಮಂದಿ ರೈತರು ಗೊಬ್ಬರದ ಸಲುವಾಗಿ ಬೆಂಗಳೂರಿಗೆ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಏನೋ ಭಾಷಣ ಮಾಡಬೇಕೆಂದು ಮಾಡುತ್ತಿದ್ದೀರಿ. ಇದಕ್ಕೆ ತಿಂಕ್ ಟ್ಯಾಂಕ್ ಏತಕ್ಕೆ? ತಿಂಕ್ ಇದೆ, ಟ್ಯಾಂಕ್ ಬೇಕಾದರೆ ಕೊಡಿಸೋಣ.

ಅಧ್ಯಕ್ಷರು.—ಅವರು ಹೇಳುವುದನ್ನು ಸ್ವಲ್ಪ ಕೇಳಿರಿ. ಹೆಚ್ಚಿಗೆ ಮಾಹಿತಿ ಬೇಕಾದರೆ ಅವರ ಪಕ್ಕದಲ್ಲಿ ಕುಳಿತು ಚರ್ಚೆ ಮಾಡಿ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಎಡಿಯೂರಪ್ಪ.—೧೪ ರೂಪಾಯಿ ಜಾಸ್ತಿ ಕೊಟ್ಟಿರುವುದನ್ನು ವಾಪಸ್ಸು ಕೊಡಿ ತೀರಾ? ನನಗೆ ಸರಿಯಾದ ಉತ್ತರವನ್ನು ಕೊಡದಿದ್ದರೆ ಸರ್ಕಾರದ ನೀತಿಯನ್ನು ನಾನು ಒಪ್ಪುವುದಿಲ್ಲ. ಶೋಷಣೆ ತಪ್ಪಿಸಬೇಕೆಂದು ವಿನಂತಿ ಮಾಡಿದಾಗಲೂ ಸರಿಯಾದ ಉತ್ತರ ಕೊಡದಿದ್ದರೆ ತಮಗೆ ಏನು ಅನ್ನಿಸುತ್ತದೆ ? ನಾನು ಈ ಸರ್ಕಾರದ ನೀತಿಯನ್ನು ವಿರೋಧಿಸುತ್ತೇನೆ. ನಾನು ಇದನ್ನು ಪ್ರತಿಭಟನೆ ಮಾಡಿ ಸರ್ಕಾರಕ್ಕೆ ಯಾವುದೇ ಕಳಕಳಿ ಇಲ್ಲ, ರೈತರನ್ನು ಶೋಷಣೆ ಮಾಡುತ್ತಿದೆ. ಒಂದು ಕ್ವಿಂಟಾಲಿಗೆ ೧೪ ರೂಪಾಯಿ ಜಾಸ್ತಿಯಾಗಿರುವುದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರದ ಈ ನೀತಿಯನ್ನು ವಿರೋಧಿಸಿ ಪ್ರತಿಭಟನೆ ಮಾಡಿ ರೈತರ ಬಗ್ಗೆ ಕಳಕಳಿ ಇಲ್ಲ, ಚಿಂತನೆ ಇಲ್ಲ, ರೈತರನ್ನು ಶೋಷಣೆ ಮಾಡುತ್ತಿದ್ದಾರೆಂದು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ಬಿ. ಎಸ್. ಎಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯ ಮೇಲೆ ಮತ್ತೆ ಬೇರೆ ಯಾರಿಗೂ ಕೇಳಲು ಈಗ ಅವಕಾಶ ಇರುವುದಿಲ್ಲವೆಂದು ಎಲ್ಲರಲ್ಲೂ ಮನವಿ ಮಾಡಿಕೊಳ್ಳುತ್ತೇನೆ.

2) ಕೋಲಾರ ಜಿಲ್ಲೆಯಲ್ಲಿ ವಿದ್ಯುತ್ ಅಭಾವದಿಂದ ರೈತರಿಗಾಗಿರುವ ತೊಂದರೆಯ ಬಗ್ಗೆ.

SRI R. VENKATARAMAIAH (Kolar).—Sir, I beg to call the attention of the Hon'ble Minister for Power and Industry tothe hardship caused to the ryots due to non-supply of electricity for pumpsets.

(ಶ್ರೀ ಬೈರೇಗೌಡರು ಮಾತನಾಡಲು ನಿಂತರು)